ಉ. ಈಗಿನ ಹೊಸ ಕಟ್ಟಡದಲ್ಲಿ ಕ್ಷ ಕಿರಣ ಯಂತ್ರವನ್ನು ಅಳವಡಿಸಲು ಸ್ಥಳಾವಕಾಶವಿರುವುದಿಲ್ಲ. ಈ ಬಗ್ಗೆ ಇದಕ್ಕೆ ಅನುಕೂಲವಾಗುವಂತೆ ಕಟ್ಟಡದ ನಿರ್ಮಾಣ ಕೈಗೊಳ್ಳಲಾಗಿದೆ. ಕಟ್ಟಡ ಸಿದ್ಧವಾದ ಮೇಲೆ ಹಳೆಯ ಕಟ್ಟಡದಿಂದ ಹೊಸ ಕಟ್ಟಡಕ್ಕೆ ಕ್ಷ ಕಿರಣ ಯಂತ್ರವನ್ನು ವರ್ಗಾಯಿಸಿ ಅಳವಡಿಸ ಲಾಗುವುದು.

ಶ್ರೀ ಕೆ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ, ಹರಿಹರ ನಗರದಲ್ಲಿರತಕ್ಕಂಥ ಆಸ್ಪತ್ರೆ ಊರಿನ ಹೊರ ವಲಯದಲ್ಲಿದ್ದು ಜನರಿಗೆ ಬಹಳ ಕಷ್ಟವಾಗುತ್ತಿದೆ. ಕ್ಷ ಕ್ಷಿರಣ ಘಟಕವನ್ನು ತೀವ್ರಗತಿಯಲ್ಲಿ ಅಲ್ಲಿಗೆ ಸ್ಥಳಾಂತರಿಸಬೇಕೆಂದು ಸರಕಾರವನ್ನು ಕೇಳಿಕೊಳ್ಳುತ್ತೇನೆ. ಮತ್ತೆ ನಗರದ ಮಧ್ಯದಲ್ಲಿರುವ ಹೆಳೀ ಆಸ್ಪತ್ರೆ ಕಟ್ಟಡದಲ್ಲಿ ಕುಷ್ಠರೋಗದ ಆಸ್ಪತ್ರೆ ಇದೆ. ಅದನ್ನು ಅಲ್ಲಿಂದ ಸ್ಥಳಾಂತರಿಸಬೇಕೆಂದು ಮಾನ್ಯ ಸಚಿವರನ್ನು ಸುಮಾರು ಸಲ ಕೇಳಿಕೊಂಡಿದ್ದೇನೆ. ಹಳೆಯ ಆಸ್ಪತ್ರೆ ಕಟ್ಟಡದಲ್ಲಿ ಹೆರಿಗೆ ಮತ್ತು ಮಕ್ಕಳ ಆಸ್ಪತ್ರೆ ಪ್ರಾರಂಭಿಸಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಂಡಿದ್ದೇನೆ. ಇನ್ನು ಎಷ್ಟು ಕಾಲದಲ್ಲಿ ಇದನ್ನು ಮಾಡುತ್ತೀರಿ ಎಂಬುದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅಧ್ಯಕ್ಷರೇ, ಮಾನ್ಯ ಸದಸ್ಯರು ಕೆಲವು ಉಪ ಪ್ರಶ್ನೆಗಳನ್ನು ಕೇಳಿದ್ದಾರೆ. ಹರಿಹರ ನಗರದಲ್ಲಿ, ಹಳೆಯ ಆಸ್ಪತ್ರೆಗೂ, ಹೊಸ ಆಸ್ಪತ್ರೆಗೂ ಮಧ್ಯೆ ಸುಮಾರು ಒಂದೂವರೆ ಕಿಲೋಮೀಟರ್ ದೂರ ಅಂತರ ಇರುವುದರಿಂದ ಸಾರ್ವಜನಿಕರಿಗೆ ವಿಪರೀತ ತೊಂದರೆ ಯಾಗುತ್ತಿದೆ ಎಂಬುದನ್ನು ಮಾನ್ಯ ಸದಸ್ಯರು ಇವತ್ತೇ ನನ್ನ ಗಮನಕ್ಕೆ ತಂದಿರುವುದು. ಅದರ ಬಗ್ಗೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇನೆ, ಹೊಸ ಆಸ್ಪತ್ರೆ ಕಟ್ಟಡದಲ್ಲಿ ಕ್ಷ ಕಿರಣ ಯಂತ್ರ ಅಳವಡಿಸು ವುದಕ್ಕೆ ಬೇಕಾಗಿರುವ ಕ್ರಮ ತೆಗೆದುಕೊಳ್ಳುತ್ತೇನೆ. ಇನ್ನು ಕುಷ್ಠರೋಗದ ಆಸ್ಪತ್ರೆಯನ್ನು ವರ್ಗಾ ವಣೆ ಮಾಡುವುದರ ಬಗ್ಗೆ ನನ್ನಲ್ಲಿ ಮಾಹಿತಿ ಇಲ್ಲ. ಮಾನ್ಯ ಸದಸ್ಯರು ನನ್ನನ್ನು ಭೇಟಿ ಮಾಡಿ ಹೇಳಿದ್ದಾರೆ. ಅದರ ಬಗ್ಗೆ ಸೂಕ್ತ ಕ್ರಮ ಆದಷ್ಟು ಬೇಗ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ವಿಷಯ : ಚನ್ನಪಟ್ಟಣದ ತಿಮ್ಮಪ್ಪರಾಜ ಅರಸರ ಅರಮನೆ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 658 (1626) ಶ್ರೀ ಎಂ. ವರದೇಗೌಡ (ಚನ್ನಪಟ್ಟಣ)

ಯುವ ಜನ ಮತ್ತು ಕ್ರೀಡಾ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ ?

(ಅ) ಚನ್ನಪಟ್ಟಣದಲ್ಲಿರುವ ತಿಮ್ಮಪ್ಪರಾಜ ಅರಸರ ಅರಮನೆ ಯಾರ ವಶದಲ್ಲಿದೆ ;

(ಆ) ಇದು ಶಿಥಿಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಆಲ್ಲಿ ಲಕ್ಷಾಂತರ ರೂಪಾಯಿಗಳ ಸಾಮಾನು ದುರುಪಯೋಗವಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಜೀವರಾಜ ಆಳ್ವ (ಕನ್ನಡ ಮತ್ತು ಸಂಸ್ಕೃತಿ ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು)

(ಅ) ಚನ್ನಪಟ್ಟಣದಲ್ಲಿರುವ ತಿಮ್ಮಪ್ಪರಾಜ ಅರಸರ ಅರಮನೆಯು ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯ, ನಿರ್ದೇಶನಾಲಯದ ವಶದಲ್ಲಿದೆ.

(ಆ) ಹೌದು.

(ಇ) ಇಲ್ಲ.

(ಈ) ಉದ್ಭವಿಸುವುದಿಲ್ಲ.

ಶ್ರೀ ಎಂ. ವರದೇಗೌಡ.—ಮಾನ್ಯ ಅಧ್ಯಕ್ಷರೇ, ಚನ್ನಪಟ್ಟಣದ ತಿಮ್ಮಪ್ಪರಾಜ ಅರಸರ ಅರಮನೆ ಶಿಥಿಲವಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ಎನ್ನುವುದಕ್ಕೆ "ಹೌದು" ಎಂದ ಹೇಳಿದ್ದಾರೆ. ಅಲ್ಲಿ ಲಕ್ಷಾಂತರ ರೂಪಾಯಿಗಳ ಸಾಮಾನು ದುರುಪಯೋಗವಾಗಿದೆ. ಇದು ಸರಕಾರದ ಗಮನಕ್ಕೆ ಬಂದಿಲ್ಲ ಎಂದು ಹೇಳಿದ್ದಾರೆ. ಈಗಾಗಲೇ ಒಂದು ಕಡೆ ಕಟ್ಟಡ ಕುಸಿದು ಬಿದ್ದಿದೆ. ಇನ್ನು ಮುಂದಿನ ಮಳೆಗಾಲದಲ್ಲಿ ಆ ಅರಮನೆ ಪೂರ್ತಿ ಬೀಳುವ ಸಂಭವ ಇದೆ. ಅದು ಬಿದ್ದರೆ ಅಲ್ಲಿಯ ಜನಗಳಿಗೆ ಮತ್ತು ಪಕ್ಕದಲ್ಲಿರುವ ಮನೆಗಳಿಗೆ ತೊಂದರೆಯಾಗುತ್ತದೆ. ಇದರ ಬಗ್ಗೆ ಸರಕಾರದವರ ತೀವ್ರಗತಿಯಲ್ಲಿ ಗಮನ ಹರಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಜೀವರಾಜ ಆಳ್ವ.—ಸ್ವಾಮಿ, ಆ ಕಟ್ಟಡವನ್ನು ರೇಷ್ಮೆ ಇಲಾಖೆಯವರು ತಮ್ಮ ವಶಕ್ಕೆ ತೆಗೆದುಕೊಂಡು ಅದನ್ನು ಉಪಯೋಗಿಸುವುದಕ್ಕೆ ಅಭಿಪ್ರಾಯ ಪಟ್ಟರು. ಇದರ ಬಗ್ಗೆ ಪತ್ರ ವ್ಯವ

ಹಾರವೂ ನಡೆಯಿತು. ಆದರೆ ಇದಕ್ಕೆ ವಿಪರೀತ ಹಣ ವೆಚ್ಚವಾಗುತ್ತದೆ ಎಂದು ಅದನ್ನು ಕೈಬಿಟ್ಟರು. ಈಗ ಪ್ರಾಜ್ಯವಸ್ತು ಇಲಾಖೆ, ಆ ಅರಮನೆಯನ್ನು ಸಂರಕ್ಷಿಸುವ ಕೆಲಸಕ್ಕೆ ಒಂದು ಯೋಜನೆಯನ್ನು ತಯಾರಿಸಿದೆ. ಅದಕ್ಕೆ ಹಣವನ್ನೂ ಸಹ ಇಟ್ಟಿದ್ದೇವೆ. ಆ ಕೆಲಸವನ್ನು ಸದ್ಯದಲ್ಲೇ ತೆಗೆದು ಕೊಳ್ಳುತ್ತೇವೆ.

ವಿಷಯ : ರಾಜ್ಯದಲ್ಲಿ ಆರಕ್ಷಕ ವೃತ್ತ ನಿರೀಕ್ಷಕರುಗಳ ಹುದ್ದೆ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 659 (1522) ಶ್ರೀ ಎಂ. ಮಹಾದೇವ್ (ನಂಜನಗೂಡು)

ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ ?

(ಅ) ರಾಜ್ಯದಲ್ಲಿ ಆರಕ್ಷಕ ವೃತ್ತ ನಿರೀಕ್ಷಕರುಗಳ ಹುದ್ದೆಗಳನ್ನು ತೆಗೆದು ಹಾಕುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ;

(ಆ) ಇಲ್ಲದಿದ್ದಲ್ಲಿ, ಆರಕ್ಷಕ ವೃತ್ತ ನಿರೀಕ್ಷಕ ಹುದ್ದೆಗೆ ಸಾಕಷ್ಟು ಕೆಲಸವಿಲ್ಲದ್ದರಿಂದ ಸರ್ಕಾರದ ಮಿತವ್ಯಯಗಳ ಕ್ರಮವಾಗಿ ಈ ಹುದ್ದೆಗಳನ್ನು ತೆಗೆದುಹಾಕುವುದು ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು).—

(ಅ) ಇಲ್ಲ.

(ಆ) ಇಲ್ಲ.

(ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ಮಾನ್ಯ ಕಾನೂನು ಸಚಿವರು ಉತ್ತರಿಸಿದರು)

ಶ್ರೀ ಎ. ಲಕ್ಷ್ಮೀಸಾಗರ್.—ಎರಡು ಪ್ರಶ್ನೆಗಳಿಗೂ ನಕಾರಾತ್ಮಕವಾದ ಉತ್ತರ.

ಶ್ರೀ ಎಂ. ಮಹಾದೇವ್.—ನಿಮ್ಮ ಹತ್ತಿರ ಇನ್ನೇನಿದೆ.

ಉಪಾಧ್ಯಕ್ಷರು.—ಪಾಪಾ, ಹೋಗಿ ಹೋಗಿ ಆ ಸರ್ಕಲ್ ಇನ್‌ಸ್ಪೆಕ್ಟರುಗಳ ಮೇಲೆ ಬಿದ್ದೀದ್ದಿರಲ್ಲ ನೀವು !

ಶ್ರೀ ಎಂ. ಮಹಾದೇವ್.—ಸ್ವಾಮಿ, ಸರ್ಕಲ್ ಇನ್‌ಸ್ಪೆಕ್ಟರ್‌ರವರ ಸಂಖ್ಯೆ ರಾಜ್ಯದಲ್ಲಿ ಎಷ್ಟಿದೆ ? ಸಬ್ ಇನ್‌ಸ್ಪೆಕ್ಟರ್‌ಗಳ ಹುದ್ದೆಗಳನ್ನು ಎಷ್ಟು ಜನಸಂಖ್ಯೆಗನುಗುಣವಾಗಿ ನೇಮಿಸಿದ್ದೀರಿ. ಧರ್ಮ ವೀರ ಅವರ ವರದಿಯನ್ನು ಕಾರ್ಯಗತ ಮಾಡಿ ಸುಧಾರಣೆ ಮಾಡಲು ಏನಾದರೂ ಕ್ರಮ ತೆಗೆದು ಕೊಂಡಿದ್ದೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ರಾಜ್ಯದಲ್ಲಿ 155 ಸರ್ಕಲ್ಸ್ ಇವೆ, ಅಷ್ಟೇ ಸರ್ಕಲ್ ಇನ್‌ಸ್ಪೆಕ್ಟರ್‌ಗಳು ಇದ್ದಾರೆ. It is generally felt that there should be one Police Station for 50,000 population. According to this principle, the Police force is there.

ಶ್ರೀ ಎಂ. ಮಹಾದೇವ್.—ಮಾನ್ಯ ಅಧ್ಯಕ್ಷರೇ, ಎರಡು ತಾಲ್ಲೂಕಿಗೆ ಒಬ್ಬರು ಸರ್ಕಲ್ ಇನ್‌ಸ್ಪೆಕ್ಟರ್ಸ್ ಇದ್ದಾರೆ. ಇದು ಬಹಳ ಕಷ್ಟದ ಕೆಲಸ ಎನ್ನಿಸುತ್ತದೆ. ಪ್ರತಿ ತಾಲ್ಲೂಕಿಗೆ ಒಬ್ಬರು ಸರ್ಕಲ್ ಇನ್‌ಸ್ಪೆಕ್ಟರನ್ನು ನೇಮಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

ಉಪಾಧ್ಯಕ್ಷರು.—ಆ ಸಲಹೆಯನ್ನು ಸೆಪರೇಟಾಗಿ ಕೊಡಿ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ ಇದು ವಿಚ್ಚಿನ ವಿಷಯ. ಅವರಿಂದ ಸರಿಯಾದ ಕೆಲಸ ಆಗುತ್ತಿದೆಯೇ ಇಲ್ಲವೇ ಎಂಬುದನ್ನು ನೋಡಿಕೊಂಡು, ಅವರಿಗಿರತಕ್ಕ ಕೆಲಸದ ಒತ್ತಡ ಇವುಗಳನ್ನು ನೋಡಿಕೊಂಡು ಕ್ರಮ ತೆಗೆದುಕೊಳ್ಳುತ್ತೇವೆ. ಈಗಿರತಕ್ಕಂಥ ಕಾನೂನು ಪ್ರಕಾರ ಸರ್ಕಲ್ ಇನ್‌ಸ್ಪೆಕ್ಟರುಗಳು ಸೂಪರ್‌ವೈಸರಿ ಕೆಲಸ ಮಾಡಬೇಕಾಗಿರುತ್ತದೆ. ಅದರ ನಂತರ ಇನ್‌ಸ್ಪೆಕ್ಷನ್ ಮಾಡಿ, ಪೋಲೀಸ್ ಠಾಣೆಗಳ ಮೇಲೆ ಉಸ್ತುವಾರಿ ಇಟ್ಟುಕೊಂಡಿರತಕ್ಕ ಕೆಲಸ ಇದೆ. ಬಹಳ ದೊಡ್ಡ ಕೇಸ್‌ಗಳನ್ನು ಎಂದರೆ ಹೀನಿಯಸ್ ಕ್ರೈಮ್ಸ್‌ನಲ್ಲಿ ತಾವೇ ಇನ್‌ವೆಸ್ಟಿಗೇಷನ್ ನಡೆಸಬೇಕೆಂದು ಇದೆ. ನಿಮ್ಮ ಸಲಹೆ ಚೆನ್ನಾಗಿ ಕಂಡರೆ, ಆಡಳಿತಾತ್ಮಕವಾಗಿ ಇದನ್ನು ನೋಡಬೇಕಾಗುತ್ತದೆ. ಅದರ ಜೊತೆಗೆ ಇದು ವಿಚ್ಚಿನ ವಿಷಯ ಎಂಬುದನ್ನೂ ತಾವು ಗಮನದಲ್ಲಿಟ್ಟುಕೊಳ್ಳಬೇಕೆಂಬುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸದಸ್ಯರು ಅವರ ಕ್ಷೇತ್ರದಲ್ಲಿ, ಯಾವುದಾದರೂ ಉದಾಹರಣೆ ಇಟ್ಟು ಕೊಂಡು, ಕೆಲಸ ಸರಿಯಾಗಿ ನಡೆಯದಿದ್ದರೆ, ಅದನ್ನು ಪ್ರತ್ಯೇಕವಾಗಿ ಗಮನಕ್ಕೆ ತಂದರೆ ಸರಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಎಂ. ಮಹಾದೇವ್.—ಅಧ್ಯಕ್ಷರೇ, 50 ಸಹಸ್ರ ಜನಸಂಖ್ಯೆಗೆ ಒಂದು ಪೋಲೀಸ್ ಸ್ಟೇಷನ್ ಏರ್ಪಾಡು ಮಾಡುತ್ತೇವೆಂದು ಹೇಳಿದ್ದಾರೆ. 50 ಸಹಸ್ರಕ್ಕಿಂತ ಹೆಚ್ಚು ಜನಸಂಖ್ಯೆ ಇದ್ದರೂ ಕೂಡ